# ಸೆಲೆಬ್ರಿಟಿ

ಹನಿ

## ಹೊಸ ಗುರುವಿಗೆ ಬಿಸಿ ಸ್ವಾಗತ!



ಭಾರತೀಯ ಕ್ರಿಕೆಟ್ ತಂಡದ ಹೊಸ ಕೋಚ್ ಆಗಿ ಡಂಕನ್ ಫ್ಲೆಚರ್ ನೇಮಕವಾಗಿದ್ದಾರೆ. ನೇಮಕದ ಸುದ್ದಿಯ ಬೆನ್ನಲ್ಲೆ 'ಯಾರೀತ ಫ್ಲೆಚರ್?' ಎಂದಿದ್ದಾರೆ ಕಪಿಲ್ ದೇವ್. ಗಾವಸ್ಕರ್ ಸಹಿತ ಹಲವು ಹಿರಿಯ ಆಟಗಾರರು ಗುರ್ರ್ ಎಂದಿದ್ದಾರೆ!

ಭಾರತ ತಂಡ ವಿಶ್ವಕಪ್ ಗೆಲ್ಲುವಲ್ಲಿ ಮಹತ್ವದ ಪಾತ್ರ ವಹಿಸಿದ ಕೋಚ್ ಗ್ಯಾರಿ ಕರ್ಸ್ಟನ್ ಕೆಲಸ ಮುಗಿಸಿ ದಕ್ಷಿಣ ಆಫ್ರಿಕಾದ ಕೇಪ್‌ಟೌನ್‌ಗೆ ಮರಳಿದ ಬಳಿಕ ಅಲ್ಲಿಂದಲೇ ಹೊಸ ಕೋಚ್ ಫ್ಲೆಚರ್ ಬಂದಿರುವುದು ಕುತೂಹಲಕರ. ಈ ಫ್ಲೆಚರ್ (ಬರ್ತ್‌ಡೇ 27-9-1948) ಗ್ಯಾರಿಯ ಗುರುವೂ ಹೌದು. ಜಿಂಬಾಬ್ವೆ ಏಕದಿನ ತಂಡದ ಕ್ಯಾಪ್ಟನ್ ಆಗಿ ಫ್ಲೆಚರ್ ಸುದ್ದಿ ಮಾಡಿದ್ದಕ್ಕಿಂತ, ಇಂಗ್ಲೆಂಡಿನ ಕೋಚ್ ಆಗಿ ಸುದ್ದಿ ಮಾಡಿರುವುದೇ ಹೆಚ್ಚು. ಹಾಗೆಂದೇ ಬಿಸಿಸಿಐ ವರ್ಷಕ್ಕೆ 78 ಲಕ್ಷ ರೂಪಾಯಿ ಸಂಬಳ (ಪ್ಲಸ್ ಟಿಎ, ಡಿಎ, ಮನೆ, ಫೋನ್) ಕೊಟ್ಟು ಫ್ಲೆಚರ್‌ರನ್ನು ನೇಮಕ ಮಾಡಿದೆ. ಅದರಲ್ಲೂ ಭಾರತ ತಂಡ ವರ್ಷದ ಕೊನೆಗೆ ಆಸ್ಟ್ರೇಲಿಯಾ ಪ್ರವಾಸಕ್ಕೆ ಹೊರಡುವ ಹಿನ್ನೆಲೆಯಲ್ಲಿ ಈ ನೇಮಕ ಮಹತ್ವದ್ದೆನ್ನಿಸಿದೆ.

ಜಿಂಬಾಬ್ವೆ ಮೊದಲ ಬಾರಿಗೆ ಏಕದಿನ ಕ್ರಿಕೆಟ್ ಪ್ರವೇಶಿಸಿದಾಗ ಫ್ಲೆಚರ್ ನಾಯಕರಾಗಿದ್ದರು. 1983ರಲ್ಲಿ ಆಸೀಸ್ ವಿರುದ್ಧ ತಂಡ ಜಯ ಸಾಧಿಸಿದಾಗ ಪಂದ್ಯಶ್ರೇಷ್ಠ ಪ್ರದರ್ಶನವನ್ನೂ ನೀಡಿದ್ದರು. 1982ರ ಐಸಿಸಿ ಟ್ರೋಫಿಯಲ್ಲೂ ಆಡಿದ್ದರು. ಆದರೆ ಈವರೆಗೆ ಟೆಸ್ಟ್ ಪಂದ್ಯದಲ್ಲಿ ಆಡಿಲ್ಲ. ಆಟಗಾರನಾಗಿ ಇದಿಷ್ಟೇ ಅವರ ಮುಖ್ಯ ಸಾಧನೆಗಳು.

ಆದರೆ ಫ್ಲೆಚರ್ ಒಬ್ಬ ಲಕ್ಕೀ ಕೋಚ್ ಎನ್ನುವುದು ನಿಜ. ಇಂಗ್ಲೆಂಡಿನ ಕೋಚ್ ಆಗಿ ಈತ ನೇಮಕವಾದ ಬಳಿಕ ಇಂದ್ರಜಾಲವೇ ನಡೆಯಿತು. 2000-04 ರಲ್ಲಿ ಶ್ರೀಲಂಕಾ, ಪಾಕಿಸ್ತಾನ, ದಕ್ಷಿಣ ಆಫ್ರಿಕಾ ವಿರುದ್ಧ ಇಂಗ್ಲೆಂಡ್ ಜಯ ಗಳಿಸಿದ್ದು ಗಮನಾರ್ಹ. ನ್ಯೂಜಿಲೆಂಡ್ ವಿರುದ್ಧ 3-0 ನಲ್ಲಿ ಹಾಗೂ ವೆಸ್ಟ್ ಇಂಡೀಸ್ ವಿರುದ್ಧ 4-0 ದಲ್ಲಿ ಇಂಗ್ಲೆಂಡ್ ಸರಣಿ ಜಯ ಗಳಿಸಲು ಫ್ಲೆಚರ್ ತರಬೇತಿಯೂ ಕಾರಣ. ಎಲ್ಲಕ್ಕಿಂತ ಮುಖ್ಯವಾಗಿ 18 ವರ್ಷಗಳ ಬಳಿಕ ಆ್ಯಶಸ್ ಸರಣಿಯಲ್ಲಿ ಇಂಗ್ಲೆಂಡ್ ಆಸ್ಟ್ರೇಲಿಯಾ ವಿರುದ್ಧ ಜಯ ಸಾಧಿಸಿದ್ದು ಫ್ಲೆಚರ್ ಕಿರೀಟಕ್ಕೆ ಗರಿ ಸೇರಿಸಿತು. ಡಂಕನ್ ಫ್ಲೆಚರ್ ತಂದೆ- ಅಜ್ಜ ಮೂಲತಃ ಇಂಗ್ಲೆಂಡಿನವರು. ಆದರೆ ಫ್ಲೆಚರ್‌ಗೆ ಇಂಗ್ಲೆಂಡ್ ಪೌರತ್ವ ನೀಡಲು ಐದು ವರ್ಷಗಳ ಕಾಲ ಸತಾಯಿಸಿತ್ತು! ಡಂಕನ್ ಸೋದರ ಆಲನ್ ಫ್ಲೆಚರ್ ದೇಶೀಯ ಕ್ರಿಕೆಟ್‌ನಲ್ಲಿ ಆಡಿದ್ದರೆ, ಸೋದರಿ ಜಿಂಬಾಬ್ವೆ ಮಹಿಳಾ ಹಾಕಿ ತಂಡದ ನಾಯಕಿಯಾಗಿ, 1980ರ ಬೇಸಿಗೆ ಒಲಿಂಪಿಕ್ಸ್‌ನಲ್ಲಿ ತಂಡಕ್ಕೆ ಚಿನ್ನದ ಪದಕ ತಂದಿತ್ತಿದ್ದರು.

## ಮತ್ತೆ ಸುದ್ದಿಯಲ್ಲಿ ಪ್ಯಾರಿಸ್ ಹಿಲ್ಟನ್



'ಸೆಲೆಬ್ರಿಟಿಗಳೆಂದರೆ ವಿವಾದಾತ್ಮಕ ವ್ಯಕ್ತಿಗಳೇ' ಎನ್ನುವುದು ಹಾಲಿವುಡ್ ಸಿದ್ಧಾಂತ ಇದ್ದಂತಿದೆ. ಅದರಲ್ಲೂ ಪ್ಯಾರಿಸ್ ಹಿಲ್ಟನ್ ಎಂಬ ಮಾಡೆಲ್ ಇದ್ದಲ್ಲಿ ಗದ್ದಲ ಇದ್ದದ್ದೇ. ಮನೆಗೆ ಚಾಕು ಹಿಡಿದುಕೊಂಡು ನುಗ್ಗಿದ ಕಳ್ಳನೊಬ್ಬನ ವಿರುದ್ಧ ಕೇಸು ದಾಖಲಿಸಿದ್ದ ಪ್ಯಾರಿಸ್ ಹಿಲ್ಟನ್ ಕೋರ್ಟಿಗೆ ಸಾಕ್ಷಿ ನೀಡಲು ತೆರಳುತ್ತಿದ್ದಾಗ ಅಪರಿಚಿತ ವ್ಯಕ್ತಿಯೊಬ್ಬ ಆಕೆಯ ಜತೆಗಿದ್ದ ಬಾಯ್‌ಫ್ರೆಂಡ್ ಸೈ ವೇಟ್ಸ್ ಮೇಲೆ ಹಲ್ಲೆ ನಡೆಸಿದ್ದಾನೆ. 'ನೀನು ಇವಳನ್ನು ಮದುವೆಯಾಗಲು ಇವಳ ಅಪ್ಪ ಅನುಮತಿ ನೀಡಿದ್ದೂ ನನಗೆ ಗೊತ್ತು' ಎಂದು ಹಲ್ಲೆ ನಡೆಸಿದಾತ ಕೂಗಾಡಿದ್ದಾನೆ.

ಪ್ಯಾರಿಸ್ ಹಿಲ್ಟನ್‌ಗೆ (ಬರ್ತ್‌ಡೇ 17-2-1981) ಇದೇನೂ ಮೊದಲ ಮದುವೆಯಲ್ಲ. ಗಾಯಕ ನಿಕ್ ಕಾರ್ಟರ್‌ನಿಂದ ಹಿಡಿದು ಇತ್ತೀಚಿನ ಗೆಳೆಯ ಡ್ರಾಗ್ ರೆನ್‌ಹಾರ್ಟ್‌ವರೆಗೆ ಐದಾರು ಮಂದಿಯ ಜತೆಗೆ ಬದುಕಿದವಳೀಕೆ. ಗಾಯಕಿ, ನಟಿ, ರೂಪದರ್ಶಿ, ಟಿವಿ ನಿರೂಪಕಿ, ಲೇಖಕಿ, ಫ್ಯಾಶನ್ ಡಿಸೈನರ್ ಹೀಗೆ ಏನೆಲ್ಲ ಆಗಿರುವ ಪ್ಯಾರಿಸ್ ಹಿಲ್ಟನ್, ವಿಶ್ವಪ್ರಸಿದ್ಧ ಹಿಲ್ಟನ್ ಹೋಟೆಲ್ ಸ್ಥಾಪಕ ಕೊನ್ರಾಡ್ ಹಿಲ್ಟನ್‌ನ ಮರಿಮೊಮ್ಮಗಳು. ವಿವಾದಕ್ಕೂ ಈಕೆಗೂ ಗಳಸ್ಯ ಕಂಠಸ್ಯ. 2003ರ ಸೆಕ್ಸ್ ಟೇಪ್ ಹಗರಣ, ಕುಡಿದು ಡ್ರೈವ್ ಮಾಡಿ 2007ರಲ್ಲಿ ಜೈಲಿಗೆ ಹೋದದ್ದು, ಕೋರ್ಟಿನಲ್ಲಿ ದುರ್ವರ್ತನೆ ತೋರಿದ್ದು ಹೀಗೆ ಈಕೆಯ ಕಿರಿಕ್‌ಗಳು ಹತ್ತಾರು. ಮೊಮ್ಮಗಳ ಹರಾಕಿರಿ ನೋಡಿಯೇ ಈಕೆಯ ಅಜ್ಜ ಪಿತ್ರಾರ್ಜಿತ ಆಸ್ತಿಯಲ್ಲಿ ಶೇಕಡಾ 97ರಷ್ಟನ್ನು ಚಾರಿಟಿಗೆ ನೀಡಿದ್ದಿರಬೇಕು. ಕೋರ್ಟ್ ಹಾಲ್ ಪ್ಯಾರಿಸ್ ಹಿಲ್ಟನ್‌ಗೆ ಎರಡನೆ ಮನೆಯಂತಿದೆ.

Printed and Published by S.V. Srinivasan on behalf of The Printers (Mysore) Private Ltd. Printed at Rajhans Enterprises, No.134, 4th Main Road, Industrial Town, Rajajinagar, Bangalore- 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bangalore - 560074. Editor: K.N. TILAK KUMAR.
Editorial Office: 75, M.G Road, Bangalore-560 001 E-mail:editorsu@deccanherald.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited. RNI No 7891/65